ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ

ಸಿ.ಸಿ. ನಂ.513/2009

ಫಿರ್ಯಾದಿ : ಸರ್ಕಾರದ ಪರವಾಗಿ ಸರಗೂರು ಪೋಲೀಸ್ ಠಾಣೆ

– ವಿರುದ್ಧ –

ಆರೋಪಿಗಳು : 1. ಹುಸೇನ್ ಬಿನ್ ಜಬ್ಬಾರ್
34 ವರ್ಷ, ವಾಸಃ ಸುಲ್ತಾನ್ ಭತ್ತೇರಿ ಟೌನ್,
ಕುಪ್ಪಾಡಿ ಅಂಚೆ, ವೈನಾಡು ಜಿಲ್ಲೆ,
ಕೇರಳ ರಾಜ್ಯ.

2. ಷರೀಫ್ ಬಿನ್ ಆಸಿಸ್
32 ವರ್ಷ, ವಾಸಃ ತೆಕ್ಕತಳ್ಳಿ ಹೌಸ್,
ಚಿರಾಲ್ ಅಂಚೆ, ಸುಲ್ತಾನ್ ಭತ್ತೇರಿ,
ವೈನಾಡು ಜಿಲ್ಲೆ,
ಕೇರಳ ರಾಜ್ಯ.

## ದೋಷಾರೋಪಣೆ

ಶ್ರೀ ಸುರೇಶ.ಎಸ್.ಎನ್., ಬಿ.ಎ., ಎಲ್.ಎಲ್.ಬಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 23.06.2009 ರಂದು ಬೆಳಿಗ್ಗಿನ ಜಾವ 4.00 ಗಂಟೆ ಸಮಯದಲ್ಲಿ ಸರಗೂರು ಪೋಲೀಸ್ ಠಾಣಾ ಸರಹದ್ದು, ಹುಣಸೂರು – ಬೇಗೂರು ಮುಖ್ಯರಸ್ತೆ ಬೀರ್ವಾಳು ಗ್ರಾಮದ ನುಗು ಜಲಾಶಯದ ರಸ್ತೆಯ ಬಳಿ ಹೆಚ್.ಡಿ. ಕೋಟೆ, ಸರಗೂರು, ಗುಂಡ್ಲುಪೇಟೆ ಮಾರ್ಗವಾಗಿ

ಹೊರರಾಜ್ಯಕ್ಕೆ ಅಕ್ರಮವಾಗಿ ಲಾರಿಗಳಲ್ಲಿ ಕರಿ ಮೆಣಸನ್ನು ಸರಬರಾಜು ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ, ಚಾ.ಸಾ.1 ರವರು ತಮ್ಮ ಇಲಾಖಾ ಕಾರ್ ನಂ.ಕೆಎ-02/ಜಿ-447 ರಲ್ಲಿ ಗಸ್ತು ಮಾಡುತ್ತಿದ್ದಾಗ, ಆರೋಪಿಗಳಾದ ನೀವು ನಿಮ್ಮ ಬಾಬ್ತು ವಾಹನ ನಂ.ಕೆಎ-02/ ಎಂ.ಎ-6571 ವಾಹನದಿಂದ ಚಾ.ಸಾ.1 ರವರ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸಿ ಮುಂದೆ ಹೋಗದಂತೆ ಅಕ್ರಮ ತಡೆಯುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.341 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಮುಂದುವರೆದು, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾ.ಸಾ.1 ರವರನ್ನು ಉದ್ದೇಶಿಸಿ ನೀವು ಯಾರು ಎಂದು ಪ್ರಶ್ನಿಸಿದ್ದು, ಚಾ.ಸಾ.1 ರವರು ತಾವು ವಾಣಿಜ್ಯ ತೆರಿಗೆ ಅಧಿಕಾರಿಗಳೆಂದು ತಿಳಿಸಿದರೂ ಸಹ ಆರೋಪಿಗಳಾದ ನೀವು ಕರಿಮೆಣಸು ತುಂಬಿಕೊಂಡು ಲಾರಿ ಬರುತ್ತಿದೆ, ಲಾರಿಗಾಗಿ ಕಾಯುತ್ತಿದ್ದೇವೆ, ತಮ್ಮ ದಂಧೆಗೆ ನೀವು ಅಡ್ಡಿಪಡಿಸಬೇಡಿ ಎಂದು ಕೂಗಾಡಿ ಚಾ.ಸಾ.1 ರವರ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.353 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿತರಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

(ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 05.09.2024

(ಸುರೇಶ.ಎಸ್.ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೆಚ್.ಡಿ. ಕೋಟೆ.